# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

## ವಿಶೇಷ ರಾಜ್ಯ ಪತ್ರಿಕೆ

| ಭಾಗ – ೩<br>Part – III | ಬೆಂಗಳೂರು, ಬುಧವಾರ, ೩೧, ಡಿಸೆಂಬರ್, ೨೦೨೫ (ಪುಷ್ಯ, ೧೦, ಶಕವರ್ಷ, ೧೯೪೭)<br>BENGALURU, WEDNESDAY, 31, DECEMBER, 2025 ( PUSHYA , 10, SHAKAVARSHA, 1947) | ನಂ. ೮೪೯<br>No. 849 |
|---|---|---|

<u>ಕರ್ನಾಟಕ ಸರ್ಕಾರ</u>

ಸಂಖ್ಯೆ: ನಅಇ 110 ಎಂಎಲ್ಆರ್ 2025(e)

ಕರ್ನಾಟಕ ಸರ್ಕಾರ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ:31/12/2025.

<u>ಅಧಿಸೂಚನೆ</u>

ಕರ್ನಾಟಕ ಪೌರಸಭೆಗಳ ಕಾಯ್ದೆ 1964 ರ 3ನೇ ಪ್ರಕರಣದೊಂದಿಗೆ ಓದಿಕೊಂಡಂತೆ 4, 9, 349 ಮತ್ತು 355 ನೇ ಪ್ರಕರಣದಲ್ಲಿ ಅಗತ್ಯಪಡಿಸಿದಂತೆ ಚಿಕ್ಕಬಳ್ಳಾಪುರ ಜಿಲ್ಲೆಯ ಅಲ್ಲೀಪುರ ಗ್ರಾಮ ಪಂಚಾಯಿತಿಯನ್ನು ಅನುಬಂಧ-ಎ ರಲ್ಲಿ ನಮೂದಿಸಿರುವಂತೆ 'ಪರಿವರ್ತಿತ ಪ್ರದೇಶ'ವೆಂದು ಘೋಷಿಸಲು ಹಾಗೂ ಸದರಿ 'ಪರಿವರ್ತಿತ ಪ್ರದೇಶ' ವನ್ನು 'ಅಲ್ಲೀಪುರ ಪಟ್ಟಣ ಪಂಚಾಯಿತಿ' ಪ್ರದೇಶವೆಂದು ನಿರ್ದಿಷ್ಟಪಡಿಸಲು ಪ್ರಸ್ತಾಪಿಸಿ, ಅಧಿಸೂಚನೆ ಸಂಖ್ಯೆ ನಅಇ 110 ಎಂಎಲ್ಆರ್ 2025; ದಿನಾಂಕ:03/09/2025 ನ್ನು ದಿನಾಂಕ:04/09/2025 ರ ಕರ್ನಾಟಕ ವಿಶೇಷ ರಾಜ್ಯ ಪತ್ರದ ಭಾಗ-3 ರ ಸಂಖ್ಯೆ:540 ರಲ್ಲಿ ಪ್ರಕಟಿಸಿ, ಇದರಿಂದ ಬಾಧಿತರಾಗಬಹುದಾದ ವ್ಯಕ್ತಿಗಳಿಂದ ಸದರಿ ಅಧಿಸೂಚನೆಯನ್ನು ಪ್ರಕಟಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿ;

ಸದರಿ ರಾಜ್ಯ ಪತ್ರವನ್ನು ಪ್ರಕಟಿಸಿದ ದಿನಾಂಕದಂದು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿರುವುದರಿಂದ;

ನಿಗದಿತ ಅವಧಿಯಲ್ಲಿ ಸ್ವೀಕೃತವಾಗಿರುವ ಆಕ್ಷೇಪಣೆ/ಸಲಹೆಗಳನ್ನು ಪರಿಶೀಲನೆಗೆ ತೆಗೆದುಕೊಂಡಿರುವುದರಿಂದ;

ಕರ್ನಾಟಕ ಪೌರಸಭೆಗಳ ಕಾಯ್ದೆ 1964 ರ 3ನೇ ಪ್ರಕರಣದೊಂದಿಗೆ ಓದಿಕೊಂಡಂತೆ 4, 9, 349 ಮತ್ತು 355 ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಘನತೆವೆತ್ತ ರಾಜ್ಯಪಾಲರು ಈ ಕೆಳಗಿನವುಗಳನ್ನು ಗಮನಿಸಿ, 'ಅನುಸೂಚಿ-ಎ' ಮತ್ತು 'ಅನುಸೂಚಿ-ಬಿ' ರಲ್ಲಿ ನಮೂದಿಸಿರುವಂತೆ ಚಿಕ್ಕಬಳ್ಳಾಪುರ ಜಿಲ್ಲೆಯ ಅಲ್ಲೀಪುರ ಗ್ರಾಮ ಪಂಚಾಯಿತಿಯನ್ನು 'ಪರಿವರ್ತಿತ ಪ್ರದೇಶ' ವೆಂದು ಉದ್ಘೋಷಿಸಿ, ಸದರಿ ಪರಿವರ್ತಿತ ಪ್ರದೇಶವನ್ನು 'ಅಲ್ಲೀಪುರ ಪಟ್ಟಣ ಪಂಚಾಯಿತಿ' ಯ ಪ್ರದೇಶವೆಂದು ಪದನಾಮೀಕರಿಸಿ ಈ ಮೂಲಕ ಉದ್ಘೋಷಿಸಿರುತ್ತಾರೆ:

1. ಅಂಥ ಪ್ರದೇಶದ ಜನಸಂಖ್ಯೆ ಹತ್ತು ಸಾವಿರಕ್ಕಿಂತ ಕಡಿಮೆಯಿಲ್ಲದ ಮತ್ತು ಇಪ್ಪತ್ತು ಸಾವಿರಕ್ಕಿಂತ ಹೆಚ್ಚಿಲ್ಲದ ಹೊರತು;

2. ಅಂಥ ಪ್ರದೇಶದಲ್ಲಿನ ಜನಸಂಖ್ಯೆಯ ಸಾಂದ್ರತೆಯು ಒಂದು ಚದರ ಕಿಲೋಮೀಟರ್ ಪ್ರದೇಶಕ್ಕೆ ನಾಲ್ಕುನೂರು ನಿವಾಸಿಗಳಿಗಿಂತ ಕಡಿಮೆಯಿಲ್ಲದ ಹೊರತು;

3. ಕೃಷಿಯೇತರ ಚಟುವಟಿಕೆಗಳಲ್ಲಿನ ಉದ್ಯೋಗದ ಶೇಕಡಾವಾರು ಒಟ್ಟು ಉದ್ಯೋಗದ ಶೇಕಡ ಐವತ್ತಕ್ಕಿಂತ ಕಡಿಮೆಯಿಲ್ಲದ ಹೊರತು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಟಿ ಮಂಜುನಾಥ)**
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ

**ಕಡತ ಸಂಖ್ಯೆ:ನಅಇ 110 ಎಂಎಲ್‌ಆರ್ 2025(e).**

## ಶೆಡ್ಯೂಲ್-ಎ

| ಜಿಲ್ಲೆ | ಪರಿಗಣಿಸಿರುವ ಸ್ಥಳೀಯ ಸಂಸ್ಥೆ ಹೆಸರು | ಸೇರ್ಪಡೆಗೊಳಿಸಿರುವ ಪ್ರದೇಶಗಳ ವಿವರ | ಒಟ್ಟು ಪ್ರದೇಶ |
|---|---|---|---|
| ಚಿಕ್ಕಬಳ್ಳಾಪುರ | ಅಲ್ಲೀಪುರ ಗ್ರಾಮ ಪಂಚಾಯಿತಿ | ಹಾಲಿ ಅಲ್ಲೀಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಪ್ರದೇಶಗಳು | 1.89 ಚದರ ಕಿಲೋ ಮೀಟರ್ |

## ಷೆಡ್ಯೂಲ್-ಬಿ

ಪ್ರಸ್ತಾವಿತ ಅಲೀಪುರ ಗ್ರಾಮ ಪಂಚಾಯಿತಿ ಪ್ರದೇಶವು ಮಧುಗಿರಿ-ತೊಂಡೇಬಾವಿ ಜಿಲ್ಲಾ ಹೆದ್ದಾರಿಯಲ್ಲಿರುವ ಅಲೀಪುರ ಗ್ರಾಮದ ಈಶಾನ್ಯ ಗಡಿಯ ಭಾಗದಲ್ಲಿರುವ ಸ.ಸಂ:59ರ ಪೂರ್ವ ಭಾಗದ ಎಲ್ಲೆಯಿಂದ ದಕ್ಷಿಣಕ್ಕೆ ಸ.ನಂ: 60ರ ಗಡಿಯ ಮೂಲಕ ಸಾಗಿ ದಕ್ಷಿಣಕ್ಕೆ ತಿರುಗಿ ಸ.ನಂ:158, 159, 160,161, 162, 163, 164, 165, 22, 21, 64, 65, 66, ಅಲೀಪುರ ಮಜರೆ ಮರಾಠಿಪಾಳ್ಯ ಪೂರ್ವ ಎಲ್ಲೆಯ ಕಡೆ ಸಾಗಿ, ದಕ್ಷಿಣದ ಕಡೆ ಪಶ್ಚಿಮಕ್ಕೆ ತಿರುಗಿ ಸ.ನಂ:72 ಗಡಿಯ ಮೂಲಕ ಸಾಗಿ ಉತ್ತರಕ್ಕೆ ತಿರುಗಿ ಸ.ನಂ: 73, 20 ಗಡಿಯ ಮೂಲಕ ಸಾಗಿ ಪಶ್ಚಿಮಕ್ಕೆ ತಿರುಗಿ ಸ.ನಂ:21, 31 ಗಡಿಯ ಮೂಲಕ ಸಾಗಿ ಸರ್ವೆ ನಂ.18 ರ ಗಡಿಯ ಮೂಲಕ ದಕ್ಷಿಣಕ್ಕೆ ಸಾಗಿ ಪಶ್ಚಿಮಕ್ಕೆ ತಿರುಗಿ ಸನಂ.169, 12 ರ ಮೂಲಕ ದಕ್ಷಿಣಕ್ಕೆ ಸಾಗಿ ಸರ್ವೆ ನಂ.12 ರ ಗಡಿಯ ಮೂಲಕ ಪಶ್ಚಿಮಕ್ಕೆ ತಿರುಗಿ ಸ.ನಂ.11 ರ ಮಖೇನ ಉತ್ತರಕ್ಕೆ ತಿರುಗಿ ಸರ್ವೆ ನಂ.168, 167 ರ ಮೂಲಕ ಸಾಗಿ ಸ.ನಂ.167, 7 ಮತ್ತು 8 ಮುಖೇನ ದಕ್ಷಿಣಕ್ಕೆ ತಿರುಗಿ ಸರ್ವೆ ನಂ.8, 120 ಮೂಲಕ ಪಶ್ಚಿಮಕ್ಕೆ ತಿರುಗಿ ಸ.ನಂ. 120 ರ ಮುಖೇನ ಉತ್ತರಕ್ಕೆ ತಿರುಗಿ ನಂತರ ಸರ್ವೆ ನಂ.120 ಗಡಿ ಮೂಲಕ ಪಶ್ಚಿಮಕ್ಕೆ ತಲುಪಿ ಸರ್ವೆ ನಂ.122/1 ರ ಗಡಿಯ ಮೂಲಕ ದಕ್ಷಿಣಕ್ಕೆ ತಲುಪಿ ಸರ್ವೆ ನಂ.122/1, 135 ಗಡಿ ಮೂಲಕ ಪಶ್ಚಿಮಕ್ಕೆ ಸಾಗಿ ಸರ್ವೆ ನಂ.135, 136 ಗಡಿಯ ಮೂಲಕ ದಕ್ಷಿಣಕ್ಕೆ ತಲುಪಿ ಸರ್ವೆ ನಂ.136 ರ ಗಡಿಯ ಮೂಲಕ ಪೂರ್ವಕ್ಕೆ ತಿರುಗಿ ಸರ್ವೆ ನಂ.138 ರ ಗಡಿಯ ಮೂಲಕ ಉತ್ತರಕ್ಕೆ ತಿರುಗಿ ಸರ್ವೆ ನಂ.139 ರ ಗಡಿಯ ಮುಖೇನ ಪಶ್ಚಿಮಕ್ಕೆ ತಿರುಗಿ ಸರ್ವೆ ನಂ.139 ರ ಪಶ್ಚಿಮದ ಗಡಿಯಿಂದ ಉತ್ತರಕ್ಕೆ ತಿರುಗಿ ಪಶ್ಚಿಮದ ಗಡಿ ತಲುಪಿ ಸರ್ವೆ ನಂ.5, 145 ರ ಗಡಿ ಮುಖೇನ ಉತ್ತರಕ್ಕೆ ತಲುಪಿ ಪುಲಗಾನಹಳ್ಳಿ ಗ್ರಾಮದ ಉತ್ತರ ಭಾಗದ ಸರ್ವೆ ನಂ.25 ನ್ನು ತಲುಪಿ ಪಶ್ಚಿಮಕ್ಕೆ ಸರ್ವೆ ನಂ.26 ರ ಗಡಿ ಮುಖೇನ ಕುಮಧ್ವತಿ ನದಿಯ ದಡದ ಮುಖೇನ ಉತ್ತರಕ್ಕೆ ತಲುಪಿ ಸರ್ವೆ ನಂ.12 ರ ಗಡಿಯ ಮುಖಾಂತರ ಪಶ್ಚಿಮಕ್ಕೆ ತಲುಪಿ ಉತ್ತರಕ್ಕೆ ತಿರುಗಿ ಪೂರ್ವಕ್ಕೆ ತಿರುಗಿ ಸರ್ವೆ ನಂ.13, 14 (ಭಾಗಶಃ ವಿಸ್ತೀರ್ಣ) ಮತ್ತು ಸರ್ವೆ ನಂ. 15 ರ ಗಡಿ ಮುಖಾಂತರ ಪೂರ್ವಕ್ಕೆ ತಿರುಗಿ ಸರ್ವೆ ನಂ.18 ರ ಮುಖಾಂತರ ಉತ್ತರಕ್ಕೆ ತಲುಪಿ ಸರ್ವೆ ನಂ. 18, 31 ರ ಗಡಿಯ ಮೂಲಕ ಪೂರ್ವಕ್ಕೆ ಸಾಗಿ ದಕ್ಷಿಣಕ್ಕೆ ತಿರುಗಿ ಸರ್ವೆ ನಂ.31, 20, 21 ರ ಗಡಿ ಮುಖಾಂತರ ಸಾಗಿ ಪೂರ್ವಕ್ಕೆ ತಿರುಗಿ ಅಲೀಪುರ ಗ್ರಾಮದ ಸರ್ವೆ ನಂ.45 ರ ಪೂರ್ವಕ್ಕೆ ತಿರುಗಿ ಉತ್ತರದ ಕಡೆಗೆ ಸರ್ವೆ ನಂ.156 ರ ಗಡಿಯ ಮುಖೇನ ಸಾಗಿ ಪೂರ್ವಕ್ಕೆ ತಿರುಗಿ ಸರ್ವೆ ನಂ.172, 48 ರ ಮುಖೇನ ಉತ್ತರಕ್ಕೆ ತಲುಪಿ ಪೂರ್ವಕ್ಕೆ ತಿರುಗಿ ಕಾಮಗಾನಹಳ್ಳಿ ಗ್ರಾಮದ ಗಡಿ ಮುಖಾಂತರ ಸರ್ವೆ ನಂ.59 ರ ಈಶಾನ್ಯದ ಅಂಚನ್ನು ಸೇರಿ ಅಲೀಪುರ ಗ್ರಾಮ ಪಂಚಾಯಿತಿ ಪ್ರದೇಶದ ಎಲ್ಲೆಯು ಮುಕ್ತಾಯವಾಗುತ್ತದೆ.

## GOVERNMENT OF KARNATAKA

**No.UDD 110 MLR 2025(e)**

Karanataka Government Secretariat,
Vikasa Soudha,
Bangalore, **dated:31/12/2025.**

## NOTIFICATION

Whereas the Notification to declare the Grama Panchayat Area of Allipur of Chikkaballapur District as a Transitional Area and further to specify such Areas as the Town Panchayat of Allipur as mentioned in Schedule-A along with boundaries mentioned in Schedule-B was published as required by section-3 read with section-4, 9, 349 and 355 of the Karnataka Municipalities Act, 1964, vide Government Notification No:UDD 110 MLR 2025; dated 03/09/2025 by providing thirty days time and was published in part-III, No.540, Karnataka Gazette Extraordinary, dated 04/09/2025 inviting objections from all persons likely to be affected thereby on or before thirty days from the date of publication of the above Notification.

And whereas the Notification was made available to the public on the day of publication;

And whereas the objections/suggestions received within the stipulated period have been verified;

Now, therefore, in exercise of the powers conferred by Section-3, 4, 9, 349 and 355 of the Karnataka Municipalities Act, 1964, the Hon'ble Governor, hereby declare the Grama Panchayat Area of Allipur, Chikkaballapur District as mentioned in Schedule–A, along with boundaries mentioned in Schedule–B, as the "Transitional Area" and further specify such area to be the "Town Panchayat Area of Allipur" having regard to:

1. The population of such area is not less than ten thousand and not more than twenty thousand;
2. The density of population in such area is not less than four hundred inhabitants to one square kilometer of area;
3. The percentage of employment in non-agricultural activities is not less than fifty per cent of the total employment.

By Order and in the name of the
Governor of Karnataka,

**(T Manjunath)**
Under Secretary to Government,
Urban Development Department

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



**No.UDD 110 MLR 2025(e)**

**Schedule-A**

| District | Grama Panchayat considered | Areas included | Total Area |
|---|---|---|---|
| Chikkaballapura | Grama Panchayat of Allipur | Present Areas of Grama Panchayat of Allipur | 1.89 Square Kilo Meter |

**Schedule-B**

The proposed Allipur Grama Panchayat area extends from the eastern boundary of Survey No. 59 on the north-eastern boundary of Allipur village on the Madhugiri-Tondebavi district highway, southwards through the boundary of Survey No.60, turning southwards, passing through the boundary of Survey No.158, 159, 160, 161, 162, 163, 164, 165, 22, 21, 64, 65, 66, Allipur Majare, towards the eastern boundary of Maratipalya, turning southwards, passing through the boundary of Survey No.72, turning northwards, passing through the boundary of Survey No.73, 20 turning westwards, passing through the boundary of Survey No.21, 31, passing through the boundary of Survey No. 18, turning southwards and turning westwards. Proceeding south through Survey No.169, 12 and turning west through the boundary of Survey No.12 and turning north through Survey No.11 and turning south through Survey No.168, 167 and turning south through Survey No.167, 7 and 8 and turning west through Survey No.8, 120 and turning north through S.No.120 and then reaching west through the boundary of Survey No.120 and reaching south through the boundary of Survey No.122/1 and moving west through the boundary of Survey No.122/1 and 135 and reaching south through the boundary of Survey No.135 and 136 and turning east through the boundary of Survey No.136 and turning north through the boundary of Survey No.138 and turning west through the boundary of Survey No.139 and north from the western boundary of Survey No.139 Turn and reach the western boundary and reach the boundary of Survey No. 5, 145, reach north, reach Survey No. 25 on the northern side of Pulaganahalli village, reach westward through the boundary of Survey No. 26, reach northward through the bank of Kumadhwati river, reach westward through the boundary of Survey No. 12, turn northward, turn eastward through the boundary of Survey No. 13, 14 (partial extent) and Survey 15, turn eastward through the boundary of Survey No. 18, reach northward through the boundary of Survey No. 18, move eastward through the boundary of Survey No. 31, turn southward through the boundary of Survey No. 31, 20, 21, turn eastward through Survey No. 45 of Allipur village, move northward through the boundary of Survey No. 156, turn eastward through Survey No. 172, 48 Reaching north, turning east, the boundary of Allipur Grama Panchayat area ends at the northeastern edge of Survey No. 59 through the boundary of Kamganahalli village.

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH